*O.S./227/2024*
*P.W-2*

(ಸಾಕ್ಷಿಗೆ ದಿನಾಂಕ: 30.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ಸಿ.ಜಿ., ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನಿ.ಪಿ.1 ದಾಖಲೆಯನ್ನು ನಾನು ಈಗ ನೋಡುತ್ತಿದ್ದೇನೆ. ನಿ.ಪಿ.1 ದಾಖಲೆಯನ್ನು 1 ಮತ್ತು 2ನೇ ಪ್ರತಿವಾದಿಯರು ವಾದಿಗೆ ಬರೆದುಕೊಟ್ಟಿರುತ್ತಾರೆ ಹಾಗೂ 3ನೇ ಪ್ರತಿವಾದಿ ಇದಕ್ಕೆ ಫೋನಿನಲ್ಲಿ ಮೌಖಿಕವಾಗಿ ಒಪ್ಪಿಕೊಂಡಿರುತ್ತಾರೆ. ನಿ.ಪಿ.1 ದಾಖಲೆಯಾಗುವವ ಕಾಲಕ್ಕೆ 3ನೇ ಪ್ರತಿವಾದಿ ದುಬೈನಲ್ಲಿ ಇರುತ್ತಾರೆ. ನಿ.ಪಿ.1 ದಾಖಲೆಗೆ ವಾದಿ ಹಾಗೂ 1 ಮತ್ತು 2ನೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆ. ಸದರಿ ಸಹಿಗಳನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಈಗಾಗಲೇ ಅನುಕ್ರಮವಾಗಿ ನಿ.ಪಿ.1(ಎ) ರಿಂದ ನಿ.ಪಿ.1(ಸಿ) ಎಂದು ಗುರುತಿಸಲಾಗಿರುತ್ತದೆ.

ನಿ.ಪಿ.1 ದಾಖಲೆಗೆ ಮೊಹಮ್ಮದ್ ಅಲ್ತಾಫ್, ಶುಕುರ್ ಪಾಷ, ಮೊಕದ್ದರ್, ನಾನು ಮತ್ತು ಅಬ್ದುಲ್ ಪಾಷರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ. ನಿ.ಪಿ.1 ದಾಖಲೆಯಲ್ಲಿರುವ ಸದರಿ ಸಹಿಗಳನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಈಗಾಗಲೇ ಅನುಕ್ರಮವಾಗಿ ನಿ.ಪಿ.1(ಡಿ) ರಿಂದ ನಿ.ಪಿ.1(ಹೆಚ್) ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ** ಪ್ರತಿವಾದಿಯರು ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.